# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ರಾಜ್ಯದಲ್ಲಿ ತಿಲಾಪಿಯಾ ಮೀನು ಪಾಲನಾ ಕೇಂದ್ರಗಳ ಮತ್ತು ಉತ್ಪಾದನಾ ಕೇಂದ್ರಗಳ ಸ್ಥಾಪನೆಗೆ ಅನುಮತಿ ನೀಡಲು ರಾಜ್ಯ ಮಟ್ಟದ ಚಾಲನಾ ಮತ್ತು ಮೇಲುಸ್ತುವಾರಿ ಸಮಿತಿ (Steering cum monitoring committee)ಯನ್ನು ರಚಿಸಲು ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ:-** (1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 35029/14/2019/FY (Trade), ದಿನಾಂಕ: 23-04-2020.
(2) ಪತ್ರ ಸಂಖ್ಯೆ: ಮೀನಿ/ಇ-14/ಪಂವಾಯೋ-1/2020, ದಿನಾಂಕ: 10-06-2020.

******

**ಪ್ರಸ್ತಾವನೆ:-**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಕೇಂದ್ರ ಸರ್ಕಾರದ ಪತ್ರದಲ್ಲಿ, ಕೇಂದ್ರ ಸರ್ಕಾರವು ರಾಜ್ಯಗಳಲ್ಲಿ ಜವಾಬ್ದಾರಿಯುತ ತಿಲಾಪಿಯ ಮೀನು ಕೃಷಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಉಲ್ಲೇಖಿತ ಮಾರ್ಗಸೂಚಿಯನ್ನು ಹೊರಡಿಸಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ನಿರ್ದೇಶಕರು, ಮೀನುಗಾರಿಕೆ ಇಲಾಖೆ ಪತ್ರದಲ್ಲಿ, ಸದರಿ ಮಾರ್ಗಸೂಚಿಯಲ್ಲಿ ತಿಲಾಪಿಯಾ ಮೀನುಮರಿ ಉತ್ಪಾದನಾ ಕೇಂದ್ರಗಳನ್ನು ಮತ್ತು ಪಾಲನಾ ಕೇಂದ್ರಗಳ ಸ್ಥಾಪನೆ ಮಾಡಲು ಅನುಮತಿ ನೀಡುವ ಸಂಬಂಧ ರಾಜ್ಯಮಟ್ಟದ ಚಾಲನಾ ಮತ್ತು ಮೇಲುಸ್ತುವಾರಿ ಸಮಿತಿ (Steering cum monitoring committee)ಯನ್ನು ರಚಿಸುವಂತೆ ಸೂಚಿಸಲಾಗಿರುತ್ತದೆ. ಅದರಂತೆ ಮೀನುಗಾರಿಕೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಚಾಲನಾ ಮತ್ತು ಮೇಲುಸ್ತುವಾರಿ ಸಮಿತಿ (Steering cum monitoring committee)ಯನ್ನು ರಚಿಸಬೇಕಿರುತ್ತದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿಗನುಸಾರವಾಗಿ ಈ ಸಮಿತಿಯ ಸ್ಥಾಪನೆಗೆ ಮತ್ತು ಕಾರ್ಯನಿರ್ವಹಣೆಗೆ ಆದೇಶ ನೀಡಬೇಕೆಂದು ಕೋರಿರುತ್ತಾರೆ.

-2-

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/122/ಮೀಇಯೋ/2020, ಬೆಂಗಳೂರು, ದಿನಾಂಕ: 24-07-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರದ ಮಾರ್ಗಸೂಚಿಯಲ್ಲಿ ತಿಲಾಪಿಯಾ ಮೀನುಮರಿ ಉತ್ಪಾದನಾ ಕೇಂದ್ರಗಳನ್ನು ಮತ್ತು ಪಾಲನಾ ಕೇಂದ್ರಗಳ ಸ್ಥಾಪನೆ ಮಾಡಲು ಅನುಮತಿ ನೀಡುವ ಸಂಬಂಧ ರಾಜ್ಯಮಟ್ಟದ ಚಾಲನಾ ಮತ್ತು ಮೇಲುಸ್ತುವಾರಿ ಸಮಿತಿ (Steering-cum-monitoring committee)ಯನ್ನು ರಚಿಸಲು ಸೂಚಿಸಲಾದಂತೆ ಮೀನುಗಾರಿಕೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಕೆಳಕಂಡಂತೆ ಚಾಲನಾ ಮತ್ತು ಮೇಲುಸ್ತುವಾರಿ ಸಮಿತಿ (Steering-cum-monitoring committee)ಯನ್ನು ರಚಿಸಿ ಆದೇಶಿಸಲಾಗಿದೆ.

| ಕ್ರಮ ಸಂಖ್ಯೆ | ತಜ್ಞರ ಹೆಸರು ಮತ್ತು ವಿಳಾಸ | ಅಧಿಕಾರ |
|---|---|---|
| 1. | ಮೀನುಗಾರಿಕೆ ನಿರ್ದೇಶಕರು | ಅಧ್ಯಕ್ಷರು |
| 2. | ಪ್ರತಿನಿಧಿ Central Institute for fresh water Aquaculture (CIFA), Bangalore | ಸದಸ್ಯರು |
| 3. | ಪ್ರತಿನಿಧಿ Central Inland Fisheries Research Institute (CIFRI), Bangalore | ಸದಸ್ಯರು |
| 4. | ವಿಜ್ಞಾನಿಗಳು, FRIC, ಹೆಬ್ಬಾಳ, ಬೆಂಗಳೂರು | ಸದಸ್ಯರು |
| 5. | ವಿಜ್ಞಾನಿಗಳು, ಕೃಷಿ ವಿಶ್ವವಿದ್ಯಾಲಯ, ಒಳನಾಡು ಮೀನುಗಾರಿಕೆ ವಿಭಾಗ, ಬೆಂಗಳೂರು. | ಸದಸ್ಯರು |
| 6. | ಮೀನುಗಾರಿಕೆ ಜಂಟಿ ನಿರ್ದೇಶಕರು (ಒಳನಾಡು) | ಕಾರ್ಯಕಾರಿ ಸದಸ್ಯರು |

**ಸಮಿತಿಯ ಪಾತ್ರ ಮತ್ತು ಕಾರ್ಯಗಳು**

1. ಯಾವುದೇ ಉದ್ದಿಮೆದಾರರು ರಾಜ್ಯದಲ್ಲಿ ತಿಲಾಪಿಯಾ ಮೀನು ಉತ್ಪಾದನೆ / ಪಾಲನಾ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿದಲ್ಲಿ **ಅನುಬಂಧ-1** ರಲ್ಲಿ ಮೀನುಗಾರಿಕೆ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸುವುದು. ಹಾಗೂ ವಿದೇಶಗಳಿಂದ ತಿಲಾಪಿಯಾ ಮೀನುಗಳನ್ನು ಆಮದು ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ಸಮಿತಿಯು ಕೇಂದ್ರ ಸರ್ಕಾರದಿಂದ ಅನುಮತಿಯನ್ನು ಪಡೆಯುವುದು ಕಡ್ಡಾಯ.

2. ಯಾವುದೇ ಉದ್ದಿಮೆದಾರರು / ಕೃಷಿಕರು ರಾಜ್ಯದಲ್ಲಿ ತಿಲಾಪಿಯಾ ಮೀನು ಕೃಷಿಗೆ ಉದ್ದೇಶಿಸಿದಲ್ಲಿ ಮೀನುಗಾರಿಕೆ ಇಲಾಖೆಗೆ **ಅನುಬಂಧ-2** ರ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸುವ ಮೂಲಕ ನೊಂದಾಯಿಸಿಕೊಳ್ಳುವುದು.

3. ಸಮಿತಿಯು ಜವಾಬ್ದಾರಿಯುತ ತಿಲಾಪಿಯಾ ಮೀನು ಕೃಷಿ ಮಾರ್ಗಸೂಚಿಯನುಸಾರ ತಿಲಾಪಿಯಾ ಮೀನು ಉತ್ಪಾದನಾ ಕೇಂದ್ರಗಳ, ಪಾಲನಾ ಕೇಂದ್ರಗಳ ಹಾಗೂ ಮೀನು ಸಾಕಾಣಿಕಾ ಕೇಂದ್ರಗಳ ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ನಡೆಸುವುದು.

4. ತಿಲಾಪಿಯಾ ಮೀನು ಉತ್ಪಾದನಾ ಮತ್ತು ಪಾಲನಾ ಕೇಂದ್ರಗಳ ಸ್ಥಾಪನೆಗೆ ಸಂಬಂಧಿಸಿದಂತೆ ಸಲ್ಲಿಸಲಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸಮಿತಿಯು ನೀಡುವ ಶಿಫಾರಸ್ಸಿನ ಆಧಾರದ ಮೇಲೆ ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇವರು ಅನುಮತಿ ನೀಡುವರು.

5. ಸಮಿತಿಯು ರಾಜ್ಯದಲ್ಲಿ ಸ್ಥಾಪಿತವಾಗಿರುವ, ನೊಂದಾಯಿತವಾಗಿರುವ ಹಾಗೂ ಮೇಲುಸ್ತುವಾರಿ ಒಳಪಟ್ಟಿರುವ ಹ್ಯಾಚರಿಗಳ ಮತ್ತು ಖಾಸಗಿ ತಿಲಾಪಿಯಾ ಮೀನು ಸಾಕಾಣಿಕಾ ಕೇಂದ್ರಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ತ್ರೈಮಾಸಿಕ ವರದಿಯನ್ನು ಸಲ್ಲಿಸುವುದು . ಈ ಮಾಹಿತಿಗಳನ್ನು ರಾಷ್ಟ್ರೀಯ ಚಾಲನಾ ಮತ್ತು ಮೇಲುಸ್ತುವಾರಿ ಸಮಿತಿ (Steering-cum-monitoring committee) ಯು ಪರಿಶೀಲಿಸುವುದು.

6. ಮೀನುಗಾರಿಕೆ ಇಲಾಖೆಯ ಜಾಲತಾಣದಲ್ಲಿ ಅನುಮತಿ ನೀಡಿರುವ ಹ್ಯಾಚರಿ / ಸಾಕಾಣಿಕೆ ಕೇಂದ್ರಗಳ ವಿವರಗಳನ್ನು ಹೆಚ್ಚಿನ ಪಾರದರ್ಶಕತೆಯ ಉದ್ದೇಶದಿಂದ ಕಲ್ಪಿಸುವುದು.

7. ಸಮಿತಿಯು ಅಗತ್ಯಬಿದ್ದಲ್ಲಿ ಯಾವುದೇ ಹ್ಯಾಚರಿ / ಸಾಕಾಣಿಕೆ ಕೇಂದ್ರಗಳ ಮಾಹಿತಿಯನ್ನು ಪಡೆಯುವ ಮತ್ತು ಮಾರ್ಗಸೂಚಿಯನ್ನು ಅನುಸರಿಸದೆ ಇರುವುದು ಕಂಡುಬಂದಲ್ಲಿ ಅಂತಹವರ ಮೇಲೆ ಸೂಕ್ತ ಕ್ರಮಕೈಗೊಳ್ಳುವ ಅಧಿಕಾರವನ್ನು ಹೊಂದಿರುತ್ತದೆ.

8. ಮೌಲ್ಯಮಾಪನ ಮತ್ತು ಪರಿಣಾಮಗಳ ಅಧ್ಯಯನವನ್ನು ಕಾಲಕಾಲಕ್ಕೆ ಕೈಗೊಂಡು ವರದಿಯನ್ನು ರಾಷ್ಟ್ರೀಯ ಚಾಲನಾ ಮತ್ತು ಮೇಲುಸ್ತುವಾರಿ ಸಮಿತಿಗೆ (Steering-cum-monitoring committee) ಸಲ್ಲಿಸುವುದು. ಹಾಗೂ ತಿಲಾಪಿಯಾ ಮೀನುಗಳು ( ಕೊಳ / ಪಂಜರಗಳಿಂದ ) ತಪ್ಪಿಸಿಕೊಳ್ಳದಂತೆ ಕೈಗೊಂಡ ಕ್ರಮಗಳು ಸಮರ್ಪಕವಾಗಿವೆಯೇ ಎಂದು ಪರಿಶೀಲಿಸುವುದು ಹಾಗೂ ಸುಧಾರಣೆ ಮಾಡುವುದು.

9. ಕರಾವಳಿ ಜಲಕೃಷಿ ಪ್ರಾಧಿಕಾರ ವ್ಯಾಪ್ತಿಯಲ್ಲಿ ತಿಲಾಪಿಯಾ ಮೀನು ಸಾಕಾಣಿಕೆ ಕೇಂದ್ರ ಸ್ಥಾಪನೆಗೆ ಸದರಿ ಪ್ರಾಧಿಕಾರಗಳ ಕಾಯಿದೆ ಮತ್ತು ನಿಯಮಗಳಿಗೊಳಪಟ್ಟು ನೊಂದಣಿಮಾಡಿಕೊಳ್ಳುವುದು. ಆದಾಗ್ಯೂ, ಈ ಮಾರ್ಗಸೂಚಿಗಳನ್ನು ಉಳಿದ ಎಲ್ಲಾ ನಿಯಮಗಳೊಂದಿಗೆ ಅನುಸರಿಸುವುದು ಕಡ್ಡಾಯವಾಗಿರುತ್ತದೆ.

10. ತಿಲಾಪಿಯಾ ಮೀನು ಹ್ಯಾಚರಿ / ಕೊಳ / ಪಂಜರಗಳಿಂದ ತಪ್ಪಿಸಿಕೊಳ್ಳುವ ಮೀನುಗಳು ಪರಿಸರ ವ್ಯವಸ್ಥೆಯ ಮತ್ತು ನೈಸರ್ಗಿಕವಾಗಿ ಇರುವ ತಿಲಾಪಿಯಾ ಮೀನುಗಳ ಮೇಲೆ ಬೀರಬಹುದಾದ ಪರಿಣಾಮಗಳನ್ನು ಪರಿಶೀಲಿಸುವುದು. ಈ ಪರಿಶೀಲನೆಗೆ ಅಗತ್ಯಬಿದ್ದಲ್ಲಿ ಹೊರಗಿನಿಂದ ತಜ್ಞರನ್ನು ನೇಮಕ ಮಾಡಿಕೊಳ್ಳುವುದು.

11. ಜವಾಬ್ದಾರಿಯುತ ತಿಲಾಪಿಯಾ ಮೀನು ಕೃಷಿ ಮಾರ್ಗಸೂಚಿಯಲ್ಲಿ ವಿವರಿಸಿರುವ ಎಲ್ಲಾ ಅಂಶಗಳನ್ನು ರೈತರು / ಉದ್ದಿಮೆದಾರರು ಕಡ್ಡಾಯವಾಗಿ ಪಾಲಿಸುವಂತೆ ನೋಡಿಕೊಳ್ಳುವುದು.

ಮೇಲ್ಕಂಡಂತೆ, ರಚಿಸಲಾಗಿರುವ ಸಮಿತಿಯು ಕಾಲಕಾಲಕ್ಕೆ ಸಭೆಗಳನ್ನು ನಡೆಸಿ ನಡವಳಿಗಳನ್ನು ಮತ್ತು ತಿಲಾಪಿಯಾ ಮೀನು ಕೃಷಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇವರ ಅನುಮತಿಗಾಗಿ ಸಲ್ಲಿಸತಕ್ಕದ್ದು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಹೆಸರಿನಲ್ಲಿ

Kamakshi U.A.
(ಕಾಮಾಕ್ಷಿ ಯು.ಎ.) 24/7/2020
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ.
(ಮೀನುಗಾರಿಕೆ)

24/07/2020

**ಇವರಿಗೆ,**

1. ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
2. ಪ್ರತಿನಿಧಿ Central Institute for fresh water Aquaculture (CIFA), Bangalore
3. ಪ್ರತಿನಿಧಿ Central Inland Fisheries Research Institute (CIFRI), Bangalore
4. ವಿಜ್ಞಾನಿಗಳು, FRIC, ಹೆಬ್ಬಾಳ, ಬೆಂಗಳೂರು.
5. ವಿಜ್ಞಾನಿಗಳು, ಕೃಷಿ ವಿಶ್ವವಿದ್ಯಾಲಯ, ಒಳನಾಡು ಮೀನುಗಾರಿಕೆ ವಿಭಾಗ, ಬೆಂಗಳೂರು.
6. ಸಂಬಂಧಪಟ್ಟ ಅಧಿಕಾರಿಗಳಿಗೆ- ಮೀನುಗಾರಿಕೆ ನಿರ್ದೇಶಕರ ಮುಖಾಂತರ.
7. ಮಾನ್ಯ ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿ/ವಿಶೇಷ ಕಾರ್ಯದರ್ಶಿ, ಪಸಂಮೀ ಇಲಾಖೆರವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರಿಗೆ.
9. ಶಾಖಾ ರಕ್ಷಾ ಕಡತ/ ಹೆಚ್ಚಿನ ಪ್ರತಿಗಳು/ಸಮನ್ವಯ-ಕಂಪೆಂಡಿಯಂ.

Annexure-I

## Application for Permission to Establish Hatchery and Breeding of Tilapia

1. Name of the Applicant (s) / registered company/ establishment (in BLOCK LETTER with permanent address, fax number, email etc.) :

2. Communication address :

3. If already farming Tilapia. Details of registration by the State Fisheries Department.(Please furnish a copy of the registration Certificate. In case certificate has not been issued, mention the Registration Number, date and other details.) :

4. Hatchery details
   - 4.1. Land area :
   - 4.2. Area allotted for hatchery :
   - 4.3. Proposed seed production capacity :
   - 4.4. List out area/dimension details of different sections of the hatchery :
   - 4.5. Enclose a copy of the Hatchery diagram :
   - 4.6. Water source and water quality details :
   - 4.7. Soil Quality Details :
   - 4.8. Land ownership details :
   - 4.9. Any other information :
5. Proposed source of broodstock :
   - 5.1. Broodstock supplier :
   - 5.2. Number of broodstock to be procured :
   - 5.3. Genetic information of the broodstock to be supplied by the suppliers :
   - 5.3.1. Generation from which the broodstock procured :
   - 5.3.2. Growth Rate at optimal environment :
   - 5.3.3. Growth Rate under monosex culture :
   - 5.3.4. Growth Rate under mixed culture :

5.4 How the genetic vigour of the broodstock will be maintained? :

5.5 Details of the technicians available with the hatchery. Give their Qualification & experience :

6. State how the seed produced by your hatchery will be distributed :

7. Whether your seed will be sold to registered

farmers only? If yes, whether sales registers are maintained? :

8. Please provide a self-contained proposal alongwith details of the purposed biosecurity measures :

9. In case the broodstock is proposed to be imported from overseas supplier: :

9.1. Please provide the details of quarantine facility at the hatchery premises :

9.2. Please provide details of the overseas supplier alongwith documents on the quality of the broodstock to be imported. :

10 Do you have Effluent Treatment Plant provided With measures to prevent escape of GIFT Tilapia into natural waters? If yes, please give the details thereof. :

11. If GIFT Tilapia seeds are to be stocked in reservoirs in cages, information to be provided by the State Department of Fisheries as to whether any farming assessment study (as per the Guidelines) was carried out to ascertain presence of Tilapia population in such reservoirs? :

12. How much area (EWA) in reservoirs is proposed to be brought under cage culture of Tilapia? :

13. What is the total area of the reservoir (EWA)?.

14. Any other information. :

**Signature of the Applicant**

## DECLARATION

I/ We hereby declare that the information furnished above is true to the best of my knowledge.

I We undertake to abide by the rules, regulations and guidelines of the Government of India.

**Signature of the Applicant**

Annexure-II

## Format for Application for Culture/Farming of Tilapia

| S.No | Particulars | Remarks |
|---|---|---|
| 1. | Name and address of the Applicants(s) registered company establishment in full (in Block Letters with permanent address) | |
| 2. | Status of the Farm: Individual/Society/Private/Proprietary/Partnership | |
| 3. | Address for communication | |
| | Street: | |
| | City: | |
| | District: | |
| | State: | |
| 4. | Location of the farm | |
| | State:<br>District:<br>Taluk/ Mandal<br>Revenue Village:<br>Survey No: | |
| 5. | Ownership (Whether free hold or on lease) | |
| 6. | If on lease, Specify the lease period and attach copy of the lease period | |
| 7. | Whether the farm is registered with DoF and approved by CAA/ Other Agency (Enclose a copy of the certificate) | |
| 8. | Attested Copy of the layout of the farm approved by DoF/MPEDA/Chartered Engineer | |
| 9. | List of species that are cultured in the farm | |
| 10 | Source of water | |
| 11. | Pond History | |
| | a) Month & year of construction of the ponds and financial assistance received if any. | |
| | b) Production details of Fish/ shrimp from the year of construction | |
| | c) Whether assistance for fish farming received under any scheme of the Central / State Government? If so, please provide the details: | |
| | d) Present condition of the ponds, if existing | |
| 12. | Details of the proposed ponds construction/renovation/ repair works of the ponds | |
| 13. | Proposed date of operation of the farm and tentative | |

| | | |
|---|---|---|
| | schedule of activities | |
| 14. | List of Machinery and facilities available at the farm (As per to the Performa at Appendix-I. | |
| 15 | Estimates regarding input costs and economics of operations in culture of Tilapia in ponds and cages | |

Place:
Date:

Signature of the applicant:
Name:
Address:

Note:
**This form should be accompanied by the additional information regarding available infrastructure at the farm as per the Appendix-I and the declaration by the applicant as per the Appendix-II.**